2ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 4628 ಃ 2019

| ಸಾಕ್ಷಿದಾರನ ಹೆಸರು | ಸಂತೋಷ್ ಆರ್ ಎಸ್ | ಸಿ ಡಬ್ಲ್ಯು | 5 |
|---|---|---|---|
| ತಂದೆಯ ಹೆಸರು | ಸಣ್ಣಪ್ಪ ಆರ್ ಜಿ | ಪಿ ಡಬ್ಲ್ಯು | 6 |
| ವಯಸ್ಸು | 46 ವರ್ಷ | | |
| ಉದ್ಯೋಗ | ಹೆಚ್.ಸಿ | | |
| ವಾಸಸ್ಥಾನ | ಜಿಗಣಿ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 23.08.2025.

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ನಾನು 2014 ರಿಂದ 2017 ರವರೆಗೆ ಜೆ.ಪಿ ನಗರ ಪೊಲೀಸ್ ಠಾಣೆಯಲ್ಲಿ ಕಾನ್ಸ್ ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 31.07.2016 ರಂದು ರಾತ್ರಿ 8.00 ಗಂಟೆಗೆ ಕರ್ತವ್ಯಕ್ಕೆ ಹಾಜರಾದಾಗ 8.30 ಗಂಟೆಗೆ ಠಾಣಾ ಎಸ್.ಹೆಚ್.ಒ ರವರು ಚಾಸಾ 4 ರವರೊಂದಿಗೆ ಕರ್ತವ್ಯಕ್ಕೆ ನೇಮಕ ಮಾಡಿದ್ದು ರಾತ್ರಿ 8.30 ರಿಂದ ಬೆಳಿಗ್ಗೆ 8.30 ಗಂಟೆಯವರೆಗೆ ಗಸ್ತಿಗಾಗಿ ನೇಮಿಸಿರುತ್ತಾರೆ. ಅದೇ ದಿನ ದಿಃ 01.08.2016 ರ ಬೆಳಗಿನ ಜಾವ 1.00 ಗಂಟೆಗೆ ಚಾಸಾ 1 ರವರು ವಾಕಿಟಾಕಿಯಲ್ಲಿ ಕರೆ ನೀಡಿ 15ನೇ ಕ್ರಾಸ್ ಸಿಂಧೂರ ಮಂಟಪದ ಬಳಿ ಬರಲು ತಿಳಿಸಿದ್ದು ಅದರಂತೆ, ನಾನು ಮತ್ತು ಚಾಸಾ 4 ರವರು ಸ್ಥಳಕ್ಕೆ ಹೋಗಿ ನೋಡಲಾಗಿ ಜನರು ಗುಂಪು ಕಟ್ಟಿದ್ದು, ದ್ವಿಚಕ್ರ ವಾಹನ ಮತ್ತು ನಾಲ್ಕು ಚಕ್ರ ವಾಹನ ನಿಂತಿದ್ದು, ಸ್ಥಳದಲ್ಲಿ ಚಾಸಾ 1 ರಿಂದ 3 ಸ್ಥಳದಲ್ಲಿ ಇದ್ದ ಜನರನ್ನು ಮನೆಗೆ ಹೋಗಲು ತಿಳಿಸಿದ್ದು ಸ್ಥಳದಲ್ಲಿ ಟೀ ಮಾರುತ್ತಿದ್ದ ಅಪರಿಚಿತ ವ್ಯಕ್ತಿ ಚಾಸಾ 1 ರವರಿಗೆ ನೀನು ಯಾರು ನನ್ನನ್ನು ಕೇಳಲು ಹಾಗಾ ತನ್ನ ಪ್ಯಾಂಟ್ ಜಿಪ್ ಅನ್ನು ತೆಗೆದು ಅವಾಚ್ಯ ಶಬ್ದಗಳಿಂದ ನಿಂದಿಸಿ ಆರೋಪಿಯು ನಿನ್ನಕ್ಕಾನ ಕೇಯ, ಸೂಳೆ ಮಗನೇ ಎಂದು ನಿಂದಿಸಿ, ತನ್ನ ಕಾಲಿನಲ್ಲಿದ್ದ ಚಪ್ಪಲಿಯನ್ನು ಚಾಸಾ 1 ರವರ ಭುಜದ ಮೇಲೆ ಎಸೆದು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು ಮತ್ತು ಚಾಸಾ 1 ರವರ ಸಮವಸ್ತ್ರವನ್ನು ಹಿಡಿದು ಎಳೆದಾಡಿ ಕೂಗಾಡುತ್ತಿರುವಾಗ ನಾವು ಅಲ್ಲೇ ಇದ್ದ ಸಾರ್ವಜನಿಕರ ಸಹಾಯದಿಂದ ಆತನನ್ನು ವಶಪಡಿಸಿಕೊಳ್ಳಲು ಹೋಗಲಾಗಿ ಆತನು ನಮಗೂ ಕೂಡ ಸೂಳೆ ಮಗನೇ, ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ. ನಂತರ ಆತನನ್ನು ವಶಪಡಿಸಿಕೊಂಡು ಅವನು ಎಸೆದ ಚಪ್ಪಲಿಯ ಸಮೇತ

ಠಾಣೆಗೆ ಹಾಜರುಪಡಿಸಿ, ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿಯನ್ನು ಮತ್ತು ಎಮ್.ಒ 01 ಅನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಜಿ.ಎಂ ವಕೀಲರಿಂದಃ

ನಮ್ಮ ಠಾಣಾ ವ್ಯಾಪ್ತಿಯಲ್ಲಿ ಸುಮಾರು 9 ಬೀಟ್ ಗಳು ಇವೆ. ಸಾಮಾನ್ಯವಾಗಿ ಪ್ರತಿ ದಿನ ನಮಗೆ ಬೀಟ್ ಅನ್ನು ಹಾಕುತ್ತಾರೆ ಎಂದರೆ ಸರಿ. ಯಾವ ಯಾವ ಬೀಟ್ ನಲ್ಲಿ ಇರುತ್ತಾರೆ ಎಂಬುದು ಗೊತ್ತಿರುತ್ತದೆ. ನಾನು ಆ ದಿವಸ 3ನೇ ಬೀಟ್ ನಲ್ಲಿ ಇದ್ದೆ. ಯಾರು ಯಾವ ಬೀಟ್ ನಲ್ಲಿ ಇದ್ದರು ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಚಾಸಾ 1 ರವರು ಗಸ್ತಿನಲ್ಲಿ ಯಾವ ಬಟ್ಟೆ ಧರಿಸಿಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ ಮತ್ತು ಘಟನೆ ನಡೆದ ಸ್ಥಳದಲ್ಲಿ ಅವರು ಯಾವ ಬಟ್ಟೆ ಧರಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಆರೋಪಿಯ ಪತ್ತೆಗಾಗಿ ಸಮವಸ್ತ್ರದಲ್ಲಿ ಹೋಗುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ 1 ರವರು ಯಾವ ಕೇಸಿಗಾಗಿ ಗಸ್ತು ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಎಲ್ಲಾ ಸಿಬ್ಬಂದಿ ವರ್ಗದವರು ತಮ್ಮ ತಮ್ಮ ಸಮವಸ್ತ್ರದಲ್ಲಿ ಇದ್ದರು. ಘಟನೆ ನಡೆದ ಸ್ಥಳ ಮತ್ತು ಬೀಟ್ ಇರುವ ಸ್ಥಳ ಸುಮಾರು 1 ರಿಂದ 1.5 ಕಿ.ಮೀ ಅಂತರವಿತ್ತು. ಸಾಮಾನ್ಯವಾಗಿ ನಮ್ಮ ಬೀಟ್ ನಲ್ಲಿ ಆದ ಘಟನೆ ನಮಗೆ ಗೊತ್ತಾಗುತ್ತದೆ ನಂತರ ಬೇರೆಯವರಿಗೆ ಗೊತ್ತಾಗುತ್ತದೆ ಎಂದರೆ ಸಾಕ್ಷಿಯು ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಘಟನೆ ಆದ ಬಗ್ಗೆ ಚಾಸಾ 1 ರವರು ವಾಕಿಟಾಕ್ ರಾತ್ರಿ 1.00 ಗಂಟೆಗೆ ತಿಳಿಸಿರುತ್ತಾರೆ. ಘಟನಾ ಸ್ಥಳಕ್ಕೆ ಬಂದಾಗ ಚಾಸಾ 1 ಮತ್ತು ಇಬ್ಬರು ಸಿಬ್ಬಂದಿ ವರ್ಗದವರು ಇದ್ದರು. ಸ್ಥಳದಲ್ಲಿ ಸುಮಾರು 10-15 ಜನರು ಇದ್ದರು. ಆರೋಪಿಯು ಟೀ ಅನ್ನು ಅದೇ ದಿವಸ ಮಾರುತ್ತಿದ್ದ. ಈ ವಿಚಾರಕ್ಕೆ ದೂರು ಬಂದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಆರೋಪಿಯು ಯಾವ ಬಣ್ಣದ ಬಟ್ಟೆ ಹಾಕಿದ್ದರು ಎಂಬುದು ನನಗೆ ಗೊತ್ತಿಲ್ಲ. ಆರೋಪಿಯು ಎಡಗಾಲಿನ ಚಪ್ಪಲಿಯನ್ನು ಚಾಸಾ 1 ರವರಿಗೆ ಎಸೆದಿರುತ್ತಾನೆ. ನನ್ನ ಹೇಳಿಕೆಯಲ್ಲಿ ನಾನು 3ನೇ ನಂಬರ್ ಬೀಟ್ ನಲ್ಲಿ ಇದ್ದೆ ಮತ್ತು ಎಡಗಾಲಿನ ಚಪ್ಪಲಿನಲ್ಲಿ ಹೊಡೆದರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಆರೋಪಿಯು ದ್ವಿಚಕ್ರ ವಾಹನದಲ್ಲಿ ಟೀ ಅನ್ನು ಮಾರುತ್ತಿದ್ದ. ಆರೋಪಿಯನ್ನು ಸ್ಥಳದಲ್ಲಿಯೇ ಹಿಡಿದಿರುತ್ತೇವೆ. ದ್ವಿಚಕ್ರ ವಾಹನ ಮುಂದೆ ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ಘಟನೆ ನಡೆದ ಸ್ಥಳದಲ್ಲಿ 1.00 ರಿಂದ 1.15 ಗಂಟೆಯವರೆಗೆ ನಾನು ಇದ್ದೆ. ಆ ದಿವಸ ಆರೋಪಿ

ಹೆಸರು ಬಿಟ್ಟು ಬೇರೆಯವರ ಹೆಸರು ನನಗೆ ಈಗ ನೆನಪಿಲ್ಲ. ಘಟನೆ ಆದ ನಂತರ ಅರ್ಧ ಗಂಟೆ ಯಲ್ಲಿ ನಾವು ಠಾಣೆಗೆ ಹೋಗಿರುತ್ತೇವೆ. ಸಿಂಧೂರ ಕಲ್ಯಾಣ ಮಂಟಪದಿಂದ ಪೂರ್ವ ಭಾಗಕ್ಕೆ ಒಂದು ರಸ್ತೆಯಿದ್ದು ಅಲ್ಲಿ ಘಟನೆ ನಡೆದಿರುತ್ತದೆ. ಆರೋಪಿಯು ಕುಡಿದಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಠಾಣೆಗೆ ಹೋದಾಗ ಪಿ.ಎಸ್.ಐ ಮತ್ತು ಠಾಣಾ ಎಸ್.ಒ ಇದ್ದರು ಅವರು ಹೆಸರು ನನಗೆ ಈಗ ನೆನಪಿಲ್ಲ. ನಾನು ಚಾಸಾ 1 ಮತ್ತು ಆರೋಪಿಯೊಂದಿಗೆ ಠಾಣೆಗೆ ಹೋಗಿರುತ್ತೇವೆ. ನನ್ನ ದ್ವಿ ಚಕ್ರ ವಾಹನದ ಸಂಖ್ಯೆ ನನಗೆ ಈಗ ನೆನಪಿಲ್ಲ. ನಾನು ಗಾಡಿಯನ್ನು ಬಿಟ್ಟು ಮಂಟಪಕ್ಕೆ ಹೋಗಿರುತ್ತೇನೆ. ಸದರಿ ವಿಷಯ ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಅರ್ಧ ಮಕ್ಕಾಲು ಗಂಟೆಯಲ್ಲಿ ಮತ್ತೆ ಬೀಟ್ ಗೆ ಹೋಗಿರುತ್ತೇನೆ. ನಂತರ ಮತ್ತೆ ನಾನು ಆರೋಪಿಯನ್ನು ನೋಡಿದ್ದು ಇರುವುದಿಲ್ಲ. ಟೀ ಮಾರುವ ವಸ್ತುವನ್ನು ಅಮಾನತ್ತು ಪಡಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ದಿವಸದಂದು ನಾನು ಕರ್ತವ್ಯಕ್ಕೆ ಹಾಜರು ಇರುವುದಿಲ್ಲ ಹಾಗೂ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸದರಿ ದಿವಸದಂದು ಸದರಿ ಮಂಟಪದಲ್ಲಿ ಇದ್ದ ಮದುವೆ ಮುಗಿಸಿಕೊಂಡು ಜನರೊಂದಿಗೆ ಹೋಗುತ್ತಿರುವಾಗ ಆತನನ್ನು ಹಿಡಿದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಬೂಟನ್ನು ಹಾಕಿಕೊಂಡು ಮದುವೆಗೆ ಹೋಗಿದ್ದು ಬೇರೆ ಯಾರದ್ದೋ ಚಪ್ಪಲಿಯನ್ನು ತಂದು ಪ್ರಕರಣದಲ್ಲಿ ಹಾಜರುಪಡಿಸಿದ್ದೀವಿ ಎಂದರೆ ಸರಿಯಲ್ಲ. ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ಚಪ್ಪಲಿಯಿಂದ ಹೊಡೆದಿರುವುದಿಲ್ಲ ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಮವಸ್ತ್ರ ಹಿಡಿದು ಎಳೆದಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ನ್ಯಾ ದಂ.